**ದಿಃ 18-09-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರವಾಗಿ** ಕುಮಾರಿ ಕೆ ಎಸ್ ಪಿ **ವಕೀಲರಿಂದ**

ಅಪಘಾತದ ದಿವಸ ನಾನು ನನ್ನ ಬೈಕನ್ನು ಹಾಲಾಡಿಯಿಂದ ಅಮಾಸೆಬೈಲು ಕಡೆಗೆ ಚಲಾಯಿಸಿಕೊಂಡು ಹೋಗುತ್ತಿದ್ದೆ. ವಾಹನ ಚಲಾಯಿಸಲು ನನಗೆ ಚಾಲನಾ ಪರವಾನಿಗೆ ಪತ್ರ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ವಾಹನಕ್ಕೆ ಅಪಘಾತಪಡಿಸಿದ ವಾಹನವು ಮುಂದಿನಿಂದ ಬಂದು ನನಗೆ ಅಪಘಾತಪಡಿಸಿರುತ್ತದೆ. ವಾಹನವು ಮುಖಾಮುಖಿಯಾಗಿ ಅಪಘಾತವಾಗಿದೆ ಎಂದರೆ ಸಾಕ್ಷಿ ಸರಿ ಅಲ್ಲ. ಅವನು ವಾಹನವನ್ನು ತಿರುಗಿಸಿ ನನ್ನ ವಾಹನದ ಬದಿಗೆ ತಾಗಿಸಿರುತ್ತಾನೆ ಅಂತ ನುಡಿಯುತ್ತಾನೆ. ಅಪಘಾತ ಆಗುವ ಪೂರ್ವದಲ್ಲಿ ಆ ವಾಹನವನ್ನು ನಾನು 5 ಫೀಟು ಅಂತರದಲ್ಲಿ ನೋಡಿರುತ್ತೇನೆ. ಅಪಘಾತ ನಡೆದ ಸ್ಥಳದಲ್ಲಿ ರಸ್ತೆ 18 ಫೀಟು ಅಗಲ ಇದೆ. ನಾನು ರಸ್ತೆಯ ಎಡಬದಿಯಲ್ಲಿ ಹೋಗುತ್ತಿದ್ದೆ. ನನ್ನ ಎಡ ಬದಿಯಲ್ಲಿ ರಸ್ತೆಯ ಅಂಚಿನವರೆಗೆ 1 ಫೀಟು ಅಂತರ ಇತ್ತು. ನನ್ನ ಮಾವ ಫಿರ್ಯಾದಿ ನೀಡಿರುತ್ತಾನೆ. ಪೋಲೀಸರು ಈ ಅಪಘಾತಕ್ಕೆ ಸಂಬಂಧಪಟ್ಟಂತೆ ನನ್ನನ್ನು ವಿಚಾರಣೆ ಮಾಡಿದ್ದಾರೆ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹಾ ನಾನೇ ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿರುತ್ತೇನೆ ಎಂದರೆ ಸರಿ ಅಲ್ಲಾ.

ಅಪಘಾತ ಪೂರ್ವದಲ್ಲಿ ನಾನು ಕಾಳಿಕಾಂಬ ವೆಲ್ಡಿಂಗ್ ವರ್ಕನಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ವಾರಕ್ಕೆ 6 ಸಾವಿರ ರೂ. ಯಂತೆ ನನಗೆ ನಗದು ಸಂಬಳ ಸಿಗುತ್ತಿತ್ತು. ನಾನು ನ್ಯಾಯಾಲಯಕ್ಕೆ ಕಾಳಿಕಾಂಬ ವೆಲ್ಡಿಂಗ್ ನಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ನನಗೆ ಅವರು ವಾಕ್ಕೆ ಆರು ಸಾವಿರ ವೇತನ ನೀಡುತ್ತಿದ್ದರು ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನಗೆ ಅರ್ಜಿಯಲ್ಲಿ ಕಾಣಿಸಿದ ಕೆಲಸ ಮತ್ತು ಸಂಬಳ ಇರಲಿಲ್ಲ ಎಂದರೆ ಸರಿ ಅಲ್ಲಾ.

ನಾನು ಅಪಘಾತದ ನಂತರ ಕೆಎಂಸಿ ಆಸ್ಪತ್ರೆಯಲ್ಲಿ 8 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸಂಪೂರ್ಣವಾಗಿ ನಾನು ಗುಣಮುಖನಾಗಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಮನೆಗೆ ಬಂದಿರುತ್ತೇನೆ ಎಂದರೆ ಸರಿ ಅಲ್ಲಾ. ಸಾಕ್ಷಿ ಮುಂದುವರಿದ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಅಂತ ನುಡಿಯುತ್ತಾರೆ. ಒಂದು ವರ್ಷದ ಹಿಂದೆ ನಾನು ಕೊನೆಯ ಬಾರಿಗೆ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು

ಹೋಗಿರುತ್ತೇನೆ. ನಾನು ಸಂಪೂರ್ಣವಾಗಿ ಗುಣಮುಖನಾಗಿದ್ದು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ ಅಲ್ಲಾ. ಧರ್ಮಸ್ಥಳ ಸಂಪೂರ್ಣ ಸುರಕ್ಷಾ ಯೋಜನೆಯಡಿಯಲ್ಲಿ ರೂಃ60,000-00 ಔಷಧಿ ವೆಚ್ಚ ಪಾವತಿಯಾಗಿರುತ್ತದೆ. ಸದ್ರಿ ಹಣಕ್ಕಿಂತ ಹೆಚ್ಚಿನ ಹಣ ನನಗೆ ವಿಮಾ ಪಾವತಿಯಾಗಿದೆ ಎಂದರೆ ಸರಿ ಅಲ್ಲಾ. ನನಗೆ ವಿಶ್ರಾಂತಿ ಪಡೆದುಕೊಳ್ಳಬೇಕು, ಕೆಲಸ ಮಾಡಬಾರದು ಅಂತ ವೈದ್ಯರು ಯಾವುದೇ ಲಿಖಿತ ಪತ್ರ ನೀಡಿಲ್ಲ ಸಾಕ್ಷಿ ಬಾಯಿ ಮಾತಿನಲ್ಲಿ ಹೇಳಿದ್ದಾರೆ ಅಂತ ನುಡಿಯುತ್ತಾರೆ. ನನಗೆ ಅಂಗನ್ಯೂನ್ಯತೆ ಆಗಿಲ್ಲದಿದ್ದರೂ ಸಹಾ ನನ್ನ ಪ್ರಕರಣಕ್ಕೆ ಅನುಕೂಲವಾಗುವಂತೆ ನ್ಯೂನ್ಯತಾ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಷ್ಟು ಹಣ ನನ್ನ ಔಷಧಿಗೆ, ಪ್ರಯಾಣಕ್ಕೆ ಪೌಷ್ಠಿಕ ಆಹಾರಕ್ಕೆ ಮತ್ತು ಪರಿಚಾರಕರಿಗೆ ಖರ್ಚು ಮಾಡಿಲ್ಲ ಎಂದರೆ ಸರಿ ಅಲ್ಲಾ. ಅಪಘಾತವು ನನ್ನ ಅಜಾಗರೂಕತನದಿಂದ ಆಗಿರುವುದರಿಂದ 2 ನೇ ಎದುರುದಾರ ವಿಮಾ ಕಂಪೆನಿಯವರಿಂದ ಯಾವುದೇ ಪರಿಹಾರ ಪಡೆಯಲು ನಾನು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**